ಹೆದರಿಕೆಯ ಮನಸ್ಥಿತಿಯಲ್ಲಿಯೇ ಇರುತ್ತೇನೆ. ಒಟ್ಟಿನಲ್ಲಿ ಅವರ ಬೇಕು ಬೇಡಗಳನ್ನು ಅರ್ಥ ಮಾಡಿಕೊಂಡು, ಅವರ ಮಾತುಗಳಿಗೆ ಎದುರಾಡದೆ, ಅವರ ಅವಶ್ಯಕತೆಗಳನ್ನು ಪೂರೈಸುತ್ತಾ ಸಂಸಾರ ಮಾಡಿದರೆ ಯಾವುದೇ ತೊಂದರೆಯಿಲ್ಲದೆ ಸುಖವಾಗಿರಬಹುದು ಎಂಬುದನ್ನು ಅರಿತುಕೊಂಡಿದ್ದೇನೆ. ನಾನು ಹಾಗೆಯೇ ಇದ್ದೇನೆ.

* * * *

ಪಕ್ಕದಲ್ಲಿ ಮಲಗಿದ್ದ ಪಾಪೂ ಕೈಕಾಲು ಆಡಿಸಿಕೊಂಡು ಕಣ್ಣು ತೆರೆದಾಗ ನನ್ನ ಯೋಚನಾ ಲಹರಿಗೆ ತಡೆ ಹಾಕಿ ವಾಸ್ತವಕ್ಕೆ ಮರಳಿದೆ. ಎದ್ದು ಪಾಪೂವನ್ನು ಎತ್ತಿಕೊಂಡು ರೂಮಿನಿಂದ ಹೊರಗೆ ಬಂದು ವಿಶಾಲವಾದ ಹಾಲಿನಲ್ಲಿದ್ದ ಮೆತ್ತನೆಯ ಸೋಫಾದ ಮೇಲೆ ಕುಳಿತುಕೊಂಡೆ. ನನ್ನ ಮನಸ್ಸು ನನ್ನ ಜೀವನದ ಹಿಂದಿನ ದಿನಗಳನ್ನು ನೆನೆದು ಭಾರವಾಗಿತ್ತು. ನನ್ನ ಅಪ್ಪಅಮ್ಮ ಇಬ್ಬರೂ ಒಟ್ಟಿಗೆ ಕಣ್ಣೆದುರು ಬಂದು ನಿಂತಂತೆ ಭಾಸವಾಗಿ ನನ್ನ ಕಣ್ಣುಗಳು ಹನಿಗೂಡಿದವು.

****

**ಸುನಿಲ್ ಕುಮಾರ್**

ನಾನು ಸುಬ್ರಹ್ಮಣ್ಯನನ್ನು ಬಸ್ಸು ಹತ್ತಿಸಿ ಮನೆ ತಲುಪಿದಾಗ ಎಂಟು ಗಂಟೆಯಾಗಿತ್ತು. ಕಾರನ್ನು ಪೋರ್ಟಿಕೋದಲ್ಲಿ ನಿಲ್ಲಿಸಿ ಗೇಟು ಹಾಕಿಕೊಂಡು ಒಳಬಂದಾಗ ಏನಪ್ಪಾ ನಿಮ್ಮ ದೋಸ್ತಿಯ ಹೊಸ ಸಮಾಚಾರ..? ಎಂದು ಶರಧಿ ನಗುತ್ತಲೇ ಕೇಳಿದಳು.

ಅಂತಾದ್ದೇನೂ ಇಲ್ಲಾ.. ಸುಮ್ಮನೆ ಬಂದಿದ್ದನಂತೆ.. ಎಂದು ಮುಗುಳ್ನಕ್ಕೆ.

ಊಟ ಮುಗಿಸೋಣವೇ.. ಎಂದು ತುಸು ವೈಯ್ಯಾರದಿಂದಲೇ ಕೇಳಿದಳು.

ನಾನು ರೂಮಿಗೆ ಹೋಗಿ ಬಟ್ಟೆ ಬದಲಿಸಿಕೊಂಡು ಬಂದು ಡೈನಿಂಗ್ ಟೇಬಲ್ಲಿನ ಮುಂದೆ ಊಟಕ್ಕೆ ಕುಳಿತೆ. ಶರಧಿ ಬಂದು ನನ್ನ ಪಕ್ಕದ ಕುರ್ಚಿಯಲ್ಲಿ ಕುಳಿತಳು. ಇಬ್ಬರೂ ಒಟ್ಟಿಗೆ ಊಟ ಮಾಡುತ್ತಿದ್ದಾಗ ಮೆಲ್ಲನೆ ಮಾತು ಶುರು ಮಾಡಿದೆ. ನನ್ನ ಮನಸ್ಸಿನಲ್ಲಿ ಗಿರಿಧರನ ವಿಷಯವನ್ನು ಅವಳಲ್ಲಿ ಹೇಳಿಕೊಳ್ಳಬೇಕೆಂಬ ಧಾವಂತವಿತ್ತು.

'ಶರೂ.. ನೀನು ಹೇಳಿದೆಯಲ್ಲಾ.. ನನ್ನನ್ನು ಹುಡುಕಿಕೊಂಡು ಬಂದಿದ್ದ.. ಅವನ ಹೆಸರು ಗಿರಿಧರ ಅಂತ.. ಅವನು ಸುಬ್ರಹ್ಮಣ್ಯನ ಚಿಕ್ಕಮ್ಮನ ಮಗನಂತೆ.. ನನ್ನನ್ನು ಭೇಟಿ ಮಾಡಲು ಸುಬ್ರಹ್ಮಣ್ಯನೇ ಅವನನ್ನು ಕಳುಹಿಸಿದ್ದನಂತೆ..' ತಲೆ ತಗ್ಗಿಸಿಕೊಂಡು ಊಟ ಮಾಡುತ್ತಲೇ ತುಸು ನಿಧಾನವಾಗಿಯೇ ನುಡಿದೆ.


'ಅಯ್ಯೋ.. ಅವನು ಒಂದು ಸರ್ತಿನೂ ಅದನ್ನ ಹೇಳಲೇ ಇಲ್ಲವಲ್ಲಾ ರೀ..!' ಶರಧಿ ಆಶ್ಚರ್ಯದಿಂದ ಉದ್ಗರಿಸಿದಳು.

'ಅವನು ತುಂಬಾ ಸಂಕೋಚದ ಮನುಷ್ಯನಂತೆ.. ಚಿಕ್ಕಹುಡುಗನಿಂದಲೂ ಹಾಗೆಯೇ ಅಂತೆ..'

'ಪಾಪ! ತುಂಬಾ ಸ್ಮಾರ್ಟ್ ಹುಡುಗಾರೀ.. ಒಳ್ಳೇ ಚಾಕೊಲೇಟ್ ಹೀರೋ ಇದ್ದಾಗಿದಾನೆ..' ಶರಧಿ ಅವನ ಬಗ್ಗೆ ತುಸು ಅನುಕಂಪ ತೋರಿದಳು.

ನನಗೆ ಗಿರಿಧರನ ವಿಷಯ ತಿಳಿಯದಿದ್ದರೆ ಶರಧಿಯ ಮಾತುಗಳಿಂದ ಅವನ ಬಗ್ಗೆ ಹೊಟ್ಟೆಕಿಚ್ಚಾಗುತ್ತಿತ್ತೋ ಏನೋ.. ಆದರೆ ಈಗ ಹಾಗಾಗಲಿಲ್ಲ.

'ಏನಂತೆ ಅವನು ಬಂದಿದ್ದ ವಿಷಯ..?' ಕುತೂಹಲದಿಂದ ಕೇಳಿದಳು.



ಶರದ ಕುಲಕರ್ಣಿ

'ಅವನು ಎಂ.ಕಾಂ. ಮಾಡಿದಾನಂತೆ.. ಕೆಲಸ ಹುಡುಕುತಿದ್ದಾನಂತೆ.. ನನ್ನಿಂದ ಏನಾದರೂ ಸಹಾಯ ಆಗಬಹುದು ಎಂದು ಸುಬ್ರಹ್ಮಣ್ಯ ಅವನಿಗೆ ನನ್ನ ಫೋನು ನಂಬರು, ಅಡ್ರೆಸ್ಸು ಕೊಟ್ಟು ಕಳುಹಿಸಿದ್ದನಂತೆ..'

'ಒಳ್ಳೆಯ ಹುಡುಗಾರೀ.. ಅವನ ಮುಖ ನೋಡಿದ್ರೆ ಗೊತ್ತಾಗುತ್ತೆ.. ಸಾಧ್ಯ ಆದ್ರೆ ಸ್ವಲ್ಪ ಹೆಲ್ಪ್ ಮಾಡ್ರೀ..' ಶರಧಿಯ ದನಿಯಲ್ಲಿ ಸಹಜ ಕಳಕಳಿಯಿತ್ತು.

'ನಾನೂ ಹೇಗಾದರೂ ಮಾಡಿ ಅವನಿಗೊಂದು ಕೆಲಸ ಕೊಡಿಸೋಣ ಅಂದುಕೊಂಡಿದ್ದೀನಿ ಶರೂ.. ಆದ್ರೆ ಈಗ ಅವನು ನಾಪತ್ತೆಯಾಗಿದಾನಂತೆ.. ಸುಬ್ರಹ್ಮಣ್ಯ ಅದನ್ನು ತಿಳಿದು ಅವರ ಚಿಕ್ಕಮ್ಮನಿಗೆ ಸಮಾಧಾನ ಹೇಳಲು ಬಂದಿದ್ದನಂತೆ..'

'ಅಯ್ಯೋ.. ಎಂತಾ ಗ್ರಹಚಾರನಪ್ಪಾ ಇದು.. ಅವನು ನಾಪತ್ತೆಯಾಗಿರೋದು ಯಾಕಂತೆ.' ಶರಧಿ ಬಾಯಿಗಿಡುತ್ತಿದ್ದ ತುತ್ತನ್ನು ಕೈಯ್ಯಲ್ಲಿಯೇ ಉಳಿಸಿಕೊಂಡು ಆತಂಕದಿಂದ ಕೇಳಿದಳು.

'ಶರೂ.. ಮೊದಲು ಊಟ ಮಾಡಿ ಮುಗಿಸೋಣ.. ಆಮೇಲೆ ಎಲ್ಲಾ ಹೇಳ್ತೀನಿ..' ಎಂದೆ. ಇಬ್ಬರೂ ಮೌನವಾಗಿ ಊಟ ಮಾಡಿ ಮುಗಿಸಿದೆವು. ನಾನು ಬಂದು ಹಾಲಿನಲ್ಲಿದ್ದ ಸೋಫಾದ ಮೇಲೆ ಕುಳಿತು ಟೀವಿ ಹಾಕಿ ಸದ್ದನ್ನು ತೀರಾ ಕಡಿಮೆ ಮಾಡಿದೆ. ಕೆಲವು ನಿಮಿಷಗಳ ನಂತರ ಶರಧಿ ಬಂದು ನನ್ನ ಪಕ್ಕದಲ್ಲಿ ಕುಳಿತಳು.

'ಯಾಕಂತೆರೀ ಅವನು ನಾಪತ್ತೆಯಾಗಿರೋದು..?' ಎಂದ ಶರಧಿಯ ದನಿಯಲ್ಲಿದ್ದ ಕುತೂಹಲ, ಆತಂಕಗಳು ನನಗೆ ಅರಿವಾದವು.

ನಾನು ಗಿರಿಧರನ ಬಗ್ಗೆ, ಅವನು ಹೇಮಾವತಿಯನ್ನು ಪ್ರೀತಿಸಿ ಅದನ್ನು ಅವಳಿಗೆ ತಿಳಿಸದೇ ಭಗ್ನಪ್ರೇಮಿಯಾದದ್ದು, ನಂತರ ಅವನ ಜೀವನದಲ್ಲಿ ನಡೆದ ಎಲ್ಲವನ್ನೂ ಸುಬ್ರಹ್ಮಣ್ಯ ನನಗೆ ತಿಳಿಸಿದಂತೆ ನಾನು ಶರಧಿಗೆ ನಿಧಾನವಾಗಿ ಹೇಳಿದೆ. ಆದರೆ ಹೇಮಾವತಿ ನನ್ನ ಬಗೆಗೆ ಬೆಳೆಸಿಕೊಂಡಿದ್ದ ಏಕಮುಖ ಪ್ರೀತಿಯ ವಿಷಯವನ್ನು ಯಾಕೋ ಏನೋ ತಿಳಿಸಲು ನನ್ನ ಮನಸ್ಸು ಒಪ್ಪಲಿಲ್ಲ. ಎಲ್ಲವನ್ನೂ ಸಾವಧಾನದಿಂದ ಕೇಳಿದ ಶರಧಿ ನಿಟ್ಟುಸಿರೊಂದನ್ನು ಬಿಟ್ಟು ನುಡಿದಳು.

'ಅಲ್ಲಾರೀ.. ಮದುವೆಗಿಂತ ಮುಂಚೆ ಹುಟ್ಟುವ ಈ ಪ್ರೀತಿ ಪ್ರೇಮ ಎಲ್ಲಾ ಒಂಥರಾ ಭ್ರಮೆ ಅಲ್ವಾ.. ಯಾರ ಬಗ್ಗೇನೋ ಒಂದು ಆಕರ್ಷಣೆ ಬೆಳೆಸಿಕೊಳ್ಳೋದು, ಅವರ ಜೊತೆ ಜೀವನ ಮಾಡಬೇಕು ಅನ್ನೋ ಹುಚ್ಚು ಹತ್ತಿಸಿಕೊಳ್ಳೋದು.. ಅದು ಸಾಧ್ಯ ಆಗದೇ ಇದ್ರೆ ಬದುಕಿನಲ್ಲಿ ಬೇರೆ ಯಾರನ್ನೂ ಆ ಸ್ಥಾನದಲ್ಲಿ ಕಲ್ಪಿಸಿಕೊಳ್ಳಲೂ ಆಗದೇ ಹತಾಶರಾಗೋದು ಎಲ್ಲವೂ ಮನುಷ್ಯನ ಮನಸ್ಸಿನ ಭ್ರಮೆಗಳೇ ಅಲ್ವಾ.?' ಶರಧಿ ವೇದಾಂತಿಯಂತೆ ನುಡಿದದ್ದು ಕೇಳಿ ನನಗೆ ಆಶ್ಚರ್ಯವಾಯಿತು. ಅವಳ ತರ್ಕವೂ ಇಷ್ಟವಾಯಿತು.

'ನೀನು ಹೇಳಿದ್ದು ನೂರಕ್ಕೆ ನೂರರಷ್ಟು ಸತ್ಯ ಶರೂ..' ಎಂದು ಅವಳ ಮಾತನ್ನು ಪುರಸ್ಕರಿಸಿದೆ.

'ಈಗ ನೋಡಿ ಈ ಗಿರಿಧರ.. ರೂಪ, ವಿದ್ಯೆ, ಒಳ್ಳೆಯ ಗುಣ ಎಲ್ಲವೂ ಇದ್ದು ಹೇಗಾಗಿದ್ದಾನೆ.. ಅವನಿಗೇನು ಕಡಿಮೆಯಾಗಿದೆ..? ಅವನು ಈಗಲೂ ಎಲ್ಲವನ್ನು ಮರೆತು ವಾಸ್ತವ ಜೀವನಕ್ಕೆ ಕಾಲಿಡಬಹುದು ಅನ್ನಿಸುತ್ತೆ.. ಅವನಿಗೆ ಯಾರೂ ಸರಿಯಾಗಿ ಕೌನ್ಸಿಲಿಂಗ್ ಮಾಡಿಲ್ಲ ಅಂತ ಕಾಣಿಸುತ್ತೆ.. ' ಶರಧಿ ಇನ್ನಿಲ್ಲದ ವಿಷಾದದಿಂದ ನುಡಿದಳು. ಅವಳ ಜೀವನದರ್ಶನಕ್ಕೆ ನಾನು ಮತ್ತೊಮ್ಮೆ ಬೆರಗಾದೆ.

'ರೀ.. ನಾನು ನಿಮ್ಮೊಂದಿಗೆ ನಿಜ ಹೇಳ್ತೀನಿ.. ನಾನು ಹೈಸ್ಕೂಲಿನಲ್ಲಿದ್ದಾಗ, ಕಾಲೇಜಿನಲ್ಲಿದ್ದಾಗ ಯಾರು ಯಾರೋ ಹುಡುಗರು ನನ್ನನ್ನ ಯಾವ ಯಾವುದೋ ನೆಪ ಮಾಡಿಕೊಂಡು ಮಾತನಾಡಿಸುತಿದ್ರು.. ನನ್ನನ್ನ ಕಂಡರೆ ಒಂದು ಸ್ಮೈಲ್ ಕೊಡ್ತಾ ಇದ್ರು.. ನನಗೆ ಯಾರ ಬಗ್ಗೇನೂ ಈ ಪ್ರೀತಿಪ್ರೇಮ ಅನ್ನೋ ಆಕರ್ಷಣೆ ಬೆಳೆಯಲೇ ಇಲ್ಲ. ನಮ್ಮಮ್ಮ ನಮ್ಮಪ್ಪನ್ನ ಮದುವೆಯಾದ ಮೇಲೆ ಪ್ರೀತಿ ಮಾಡೋದಿಕ್ಕೆ ಶುರು ಮಾಡಿದ್ರಂತೆ.. ಅವರು ಇಬ್ಬರೂ ಯಾವತ್ತೂ ಒಬ್ಬರನ್ನೊಬ್ಬರು ಬಿಟ್ಟು ಇರೋದಿಲ್ಲಾ.. ಈಗಲೂ ಅಪ್ಪ, ಅಮ್ಮನ ಮಡಿಲಲ್ಲಿ ಮಲಗಿಕೊಂಡು ಟೀವಿ ನೋಡೋದು, ಅಮ್ಮ ಅವರ ತಲೆಗೂದಲಿನಲ್ಲಿ ಬೆರಳಾಡಿಸಿಕೊಂಡು ಕುಳಿತಿರೋದನ್ನ ಎಷ್ಟೋ ಸರ್ತಿ ನಾನು ನೋಡಿದೀನಿ.. ಅದನ್ನ ನೋಡಿ ಮದುವೆಯಾದ ಮೇಲೆ ನಮ್ಮ ಪಾಲಿಗೆ ದೇವರು ಕರುಣಿಸಿದವರನ್ನ ಪ್ರೀತಿಸೋದೇ ನಿಜವಾದ ಪ್ರೀತಿ, ಅಂತಹ ಪ್ರೀತಿಯೇ ಜೀವನದುದ್ದಕ್ಕೂ ಶಾಶ್ವತವಾದದ್ದು ಅಂತ ನನಗನ್ನಿಸುತ್ತಿತ್ತು.. ನೀವು ಆವತ್ತು